5-3-2025 17

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಾಂತಾರಾಮ ಬುಡ್ನಾ ಸಿದ್ದಿ ರವರು ಮಂಡಿಸಿರುವ ಶೂನ್ಯವೇಳೆ ಪ್ರಸ್ತಾಪ:**

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಮೊಗಟಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಬ್ರಹ್ಮೂರು ಗ್ರಾಮದ ಬೇಣದಳ್ಳಿಯ 40 ಕುಟುಂಬಗಳು ವಾಸಿಸುವ ಗ್ರಾಮಕ್ಕೆ 4 ಕಿ.ಮೀ ರಸ್ತೆ ಅವಶ್ಯಕತೆ ಇದ್ದು, ರಸ್ತೆಗಾಗಿ ಕಳೆದ ಅನೇಕ ವರ್ಷಗಳಿಂದ ಬೇಡಿಕೆ ಇಟ್ಟರೂ ಸರ್ವಋತು ರಸ್ತೆ ಆಗಿರುವುದಿಲ್ಲ.

ಇಲ್ಲಿ ವಾಸಿಸುವ ಜನರಿಗೆ ಆಸ್ಪತ್ರೆ, ಶಾಲೆ ಹಾಗೂ ಅತಿಮುಖ್ಯ ರೇಷನ್ ಅಂಗಡಿಗೆ ಬರಲು ಕಾಲ್ನಡಿಗೆಯಲ್ಲಿಯೆ ಸಾಗಬೇಕಾದ ಕಾರಣ ಶಾಲೆಯಿಂದ ಹೊರಗೆ ಇರುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ & ಅನಾರೋಗ್ಯದ ಸಂಧರ್ಭದಲ್ಲಿ ಕಂಬಳಿಯಲ್ಲಿ ಹೊತ್ತುಹೋಗುವ ಪರಿಸ್ಥಿತಿ ಇದೆ. ಹೀಗಾಗಿ ಅಂಕೋಲಾ ತಾಲ್ಲೂಕಿನ ಮೊಗಟಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಸದರಿ ಬ್ರಹ್ಮೂರು ಗ್ರಾಮದ ಮಾಸ್ತಿಬೇಣ, ಸೊಪ್ಪರತಿ, ದೊಡ್ಡಬೇಣ ಮೂಲಕ ಸ.ಕಿ.ಪ್ರಾ. ಶಾಲೆ ಬೇಣದಳ್ಳಿ ವರೆಗಿನ 4 ಕಿ.ಮೀ ರಸ್ತೆಯನ್ನು ಆದಷ್ಟು ಶೀಘ್ರವಾಗಿ ನಿರ್ಮಿಸಿಕೊಡುವಂತಾಗವೇಕು ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಶೂನ್ಯವೇಳೆ ಪ್ರಸ್ತಾಪಕ್ಕೆ ಉತ್ತರ.**

ಅಂಕೋಲ ತಾಲ್ಲೂಕಿನ ಬ್ರಹ್ಮೂರು ಗ್ರಾಮದ ಬೇಣದಳ್ಳಿ ಮಜಿರಿಯು ಮೊಗಟಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ಮಜಿರಿಗೆ ಬ್ರಹ್ಮೂರು ಮೂಲಕ ರಸ್ತೆ ಸಂಪರ್ಕವಿರುತ್ತದೆ. ಈ ರಸ್ತೆಯು ಬ್ರಹ್ಮೂರುನಿಂದ ಬೇಣದಳ್ಳಿ ಶಾಲೆವರೆಗೆ 5 ಕಿ.ಮೀ ಉದ್ದವಿದ್ದು, ರಸ್ತೆಯು ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಹಾದು ಹೋಗಿರುವುದರಿಂದ, ಸರ್ವಋತು ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯ ನಿರ್ಬಂಧವಿರುವುದರಿಂದ ರಸ್ತೆ ನಿರ್ಮಾಣ ಮಾಡಲು ಸಾಧ್ಯವಾಗಿರುವುದಿಲ್ಲ. ಈ ರಸ್ತೆಯ ಚೈನೇಜ್ ಕಿ.ಮೀ 0.00 ದಿಂದ ಕಿ.ಮೀ 1.10 ವರೆಗೆ ಕಾಂಕ್ರೀಟ್ ರಸ್ತೆ ಮಾಡಲಾಗಿರುತ್ತದೆ.

ರಸ್ತೆ ನಿರ್ಮಾಣದ ಬಗ್ಗೆ ಗ್ರಾಮ ಸಭೆಗಳಲ್ಲಿ ಸಾರ್ವಜನಿಕರು ಬೇಡಿಕೆ ಇಟ್ಟಿದ್ದು, ಅನುದಾನದ ಕೊರತೆಯಿಂದ ಸರ್ವಋತು ರಸ್ತೆ ನಿರ್ಮಾಣ ಮಾಡಲು ಈವರೆಗೆ ಸಾಧ್ಯವಾಗಿರುವುದಿಲ್ಲ. ಮಳೆಗಾಲ ಹೊರತುಪಡಿಸಿ ಸದರಿ ರಸ್ತೆಯನ್ನು ಅತಿವೃಷ್ಟಿ ಮತ್ತು ಇತರೆ ಯೋಜನೆಗಳ ಪ್ರತಿ ವರ್ಷ ದುರಸ್ಥಿ ಕೈಗೊಂಡು, ಸಾರ್ವಜನಿಕರ ಮತ್ತು ವಾಹನ ಸಂಚಾರಕ್ಕೆ ಅನುಕೂಲ ಮಾಡಲಾಗುತ್ತಿದೆ.

ಬೇಣಹಳ್ಳಿ ತಿರುವುನಿಂದ ಬೇಣದಳ್ಳಿ ಶಾಲೆಯವರೆಗೆ ರಸ್ತೆ ನಿರ್ಮಾಣ ಮಾಡಲು (ಚೈನೇಜ್ ಕಿ.ಮೀ 1.10 ದಿಂದ ಕಿ.ಮೀ 5.00 ರವರೆಗೆ) ಅಂದಾಜು ರೂ.331.00 ಲಕ್ಷ ಅನುದಾನದ ಅವಶ್ಯಕತೆ ಇದ್ದು, ಅರಣ್ಯ ಇಲಾಖೆಯ ಅನುಮತಿ ಹಾಗೂ ಅನುದಾನದ ಲಭ್ಯತೆಯನ್ನಾಧರಿಸಿ ಸರ್ವಋತು ರಸ್ತೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಬೇಕಿದೆ.

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು